

**ಜೆರುಸಲೇಂ ಹಳೆಯ ನಗರದ ಅರಬ್ ಮಾರುಕಟ್ಟೆಯಲ್ಲಿ ಪ್ರವಾಸಿಗರ ಖರೀದಿಯ ಭರಾಟೆ**

ಹಾಗೂ ಆಧುನಿಕತೆಯ ಮೆರುಗು ಮೇಳೈಸಿದ ಈ ನಗರ ಬೆಟ್ಟಗುಡ್ಡಗಳ ಭುಜದ ಮೇಲೆ ನಿಂತಂತೆ ಭಾಸವಾಗುತ್ತದೆ. ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಈ ಮೂರೂ ಧರ್ಮಗಳ ಸಂಗಮ ಕ್ಷೇತ್ರ. ಈ ಮೂರೂ ಧರ್ಮಗಳ ಪುರಾಣ, ಚರಿತ್ರೆಗಳಲ್ಲಿ ಜೆರುಸಲೇಂನ ಉಲ್ಲೇಖಗಳಿವೆ ಎಂದು ಓದಿಕೊಂಡಿದ್ದರ ನೆನಪು. ಇಂತಹ ಚಾರಿತ್ರಿಕ ಮಹತ್ವವುಳ್ಳ ಈ ನಗರಕ್ಕೆ ಮೂರೂ ಧರ್ಮಗಳ ಅನುಯಾಯಿಗಳು ವರ್ಷದುದ್ದಕ್ಕೂ ಭೇಟಿ ನೀಡುತ್ತಾರೆ. ಈ ಪುರಾತನ ನಗರದಿಂದಲೇ ನಮ್ಮ ಯಾನವೂ ಶುರುವಾಯಿತು.

ಕ್ರಿಸ್ತಪೂರ್ವ ಕಾಲಘಟ್ಟದಲ್ಲೇ ರೂಪುಗೊಂಡ ನಗರಗಳಲ್ಲಿ ಜೆರುಸಲೇಂ ಕೂಡ ಒಂದು. ಅತ್ಯಂತ ಯೋಜನಾಬದ್ಧವಾಗಿ ನಿರ್ಮಾಣವಾದ ರೋಮನ್ ನಗರ. ಬೇರೆ ಬೇರೆ ಜನಾಂಗಗಳ ಆಳ್ವಿಕೆಗೆ ಒಳಪಟ್ಟಿದೆ. ಅನೇಕರಿಂದ ದಾಳಿಗೆ ಒಳಗಾಗಿದೆ. ಲೆಕ್ಕವಿಲ್ಲದಷ್ಟು ಯುದ್ಧ, ಆಕ್ರಮಣ, ಸಂಘರ್ಷಗಳಿಗೆ ಈಡಾಗಿದೆ. ಕೆಡವಲ್ಪಟ್ಟಿದೆ. ಪುನಃ ಪುಟಿದೆದ್ದಿದೆ. ಎಲ್ಲ ಬಗೆಯ ಸಂಘರ್ಷ ಮತ್ತು ಆಳ್ವಿಕೆಯ ಪಲ್ಲಟಗಳ ನಡುವೆಯೂ ಸೂಜಿಗಲ್ಲಿನಂತೆ ಸೆಳೆಯುವಂತಹ ಸೊಬಗನ್ನು ಉಳಿಸಿಕೊಂಡಿದೆ. ಹಳೆಯ ನಗರ ಮೋಹಕ ಚೆಲುವನ್ನು ಮಡಿಲಲ್ಲಿ ಇರಿಸಿಕೊಂಡಿದೆ. ಹೊಸ ನಗರ ಗಗನಮುಖಿಯಾಗಿ ಹೊಸ ಎತ್ತರಗಳನ್ನು ಹುಡುಕುತ್ತಿದೆ. ಪ್ರಾಚೀನ ಸತ್ವದ ಜತೆ ಹೊಸ ಯುಕ್ತಿ, ವಿಜ್ಞಾನ ಸಮನ್ವಯಗೊಂಡಿದೆ. ಎರಡೂ ನಗರಭಾಗಗಳು ಒಂದರೊಳಗೊಂದು ಬೆಸೆದು ಚೆಲುವು ಇಮ್ಮಡಿಗೊಳ್ಳುವಂತೆ ಮಾಡಿವೆ.

ನಗರಕ್ಕೆ ಸಂಬಂಧಿಸಿದಂತೆ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಣ ತಿಕ್ಕಾಟ ಇಂದು ನಿನ್ನೆಯದಲ್ಲ. ಎರಡೂ ಕಡೆಯವರು ಈ ನಗರವನ್ನೇ ತಮ್ಮ ರಾಜಧಾನಿ ಎಂದು ಹೇಳಿಕೊಳ್ಳುತ್ತಾರೆ. ಒಂದೇ ಪ್ರದೇಶವನ್ನು ಅರಬ್ಬರು 'ಪ್ಯಾಲೆಸ್ಟೀನ್' ಎಂದೂ ಯಹೂದಿಗಳು 'ಇಸ್ರೇಲ್' ಎಂದು ಕರೆದುಕೊಳ್ಳುವರು. ಪಶ್ಚಿಮಕ್ಕೆ ಚಾಚಿಕೊಂಡಿರುವ ಹೊಸ ನಗರದಲ್ಲಿ ಇಸ್ರೇಲ್‌ನ ಸಂಸತ್ತು, ಸಚಿವಾಲಯ ಕಟ್ಟಡಗಳಿವೆ. ನಗರದ ಯಾವುದೇ ಭಾಗದಲ್ಲಿ ನಿಂತು ನೋಡಿದರೂ ಮಿರಮಿರ ಮಿಂಚುವ ಬಂಗಾರದ ಹೊದಿಕೆಯ ಗುಮ್ಮಟವೊಂದು ಕಣ್ಣಿಗೆ ರಾಚುತ್ತದೆ. ಅದನ್ನು ಡೋಮ್ ಆಫ್ ದಿ ರಾಕ್ ಎಂದು ಕರೆಯುತ್ತಾರೆ. ಇದನ್ನು ಮೂರೂ ಧರ್ಮಗಳ ಜನರು ತಮ್ಮದೆಂದು ಭಾವಿಸುವುದಿದೆ.

ಇಸ್ರೇಲ್– ಪ್ಯಾಲೆಸ್ಟೀನ್ ನಡುವಣ ಸಂಘರ್ಷಕ್ಕೆ ಸುದೀರ್ಘ ಇತಿಹಾಸವಿದೆ. ಜೆರುಸಲೇಂ ನಗರ ಕೂಡ ಅದರಲ್ಲಿ ಒಳಗೊಂಡಿದೆ. ಆಧಿಪತ್ಯಕ್ಕಾಗಿ ನಡೆದಿರುವ ಸಂಘರ್ಷಕ್ಕೆ ಇಲ್ಲಿಯವರೆಗೂ ಪರಿಹಾರ ದೊರೆತಿಲ್ಲ. ಚರ್ಚೆ, ಸಂಧಾನ, ಶಾಂತಿಸಭೆಗಳು, ವಿಶ್ವಸಂಸ್ಥೆಯ ಹಲವಾರು ನಿರ್ಣಯಗಳಿಗೆ ಈ ಸಂಘರ್ಷವನ್ನು ಕೊನೆಗಾಣಿಸಲು ಆಗಿಲ್ಲ. ಎಂದೂ ಮುಗಿಯದ ಸಂಘರ್ಷವಾಗಿ ಇವತ್ತಿಗೂ ಉಳಿದಿದೆ. ಈ ನಗರದ